ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕೇಂದ್ರ ಸರ್ಕಾರ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : ೨೦/೧೧/೨೦೧೯

# ಶಾಶ್ವತ ಮಹಿಳಾ ಆಯೋಗ ನೇಮಿಸಿ: ಸುಪ್ರೀಂ ಆದೇಶ

**ನವದೆಹಲಿ:** ಭಾರತೀಯ ಸೇನೆಯಲ್ಲಿ ಸೇವೆಯಲ್ಲಿರುವ ಮಹಿಳಾ ಸೇನಾಧಿಕಾರಿಗಳ ಅಹವಾಲುಗಳನ್ನು ಆಲಿಸುವ ಉದ್ದೇಶದಿಂದ ಸೇನೆಯಲ್ಲಿ ಶಾಶ್ವತ ಆಯೋಗವನ್ನು ಸ್ಥಾಪಿಸುವ ಬಗ್ಗೆ ಶೀಘ್ರವೇ ನಿರ್ಧರಿಸಬೇಕೆಂದು ಭಾರತೀಯ ಸೇನೆಗೆ ಸುಪ್ರೀಂ ಕೋರ್ಟ್ ಸೂಚಿಸಿದೆ.



ಈ ಹಿಂದೆ ಸೇನೆಗೆ ಅಲ್ಪಾವಧಿಗಾಗಿ ನೇಮಕಗೊಂಡು ಅನಂತರ ನಿವೃತ್ತರಾಗಿರುವ ಎಂಟು ಮಹಿಳಾ ಅಧಿಕಾರಿಗಳು ಸಲ್ಲಿಸಿರುವ ಮನವಿ ವಿಚಾರಣೆ ನಡೆಸುವಾಗ ಈ ಕಟ್ಟುನಿಟ್ಟಾದ ಸೂಚನೆ ರವಾನಿಸಿದ ಸುಪ್ರೀಂ ಕೋರ್ಟ್, ಶಾಶ್ವತ ಆಯೋಗ ಸ್ಥಾಪನೆಯ ಬಗ್ಗೆ ನಾವು ಆದೇಶ ನೀಡಬಹುದು. ಆದರೆ, ಆ ಹೆಗ್ಗಳಿಕೆ ನಿಮಗೇ ಸಿಗಲೆಂಬ ಆಶಯದಿಂದ ಆ ಬಗ್ಗೆ ನಿರ್ಧಾರ ಕೈಗೊಳ್ಳಲು ನಿಮಗೆ ಅವಕಾಶ ನೀಡುತ್ತಿದ್ದೇವೆ ಎಂದು ಹೇಳಿತು.

ಇದೇ ವೇಳೆ, ಶಾಶ್ವತ ಆಯೋಗದ ಸ್ಥಾಪನೆ ಬಗ್ಗೆ ಇನ್ನೊಂದು ವಾರದಲ್ಲಿ ಸಕಾರಾತ್ಮಕ ವರದಿ ಸಲ್ಲಿಸುವಂತೆ ಕೇಂದ್ರ ಕಾನೂನು ಅಧಿಕಾರಿ ಸಂಜಯ್ ಜೈನ್‌ರವರಿಗೆ ಸೂಚನೆ ನೀಡಿತು. ಅಲ್ಪಾವಧಿ ಸೇವಾ ಆಯೋಗದ (ಎಸ್‌ಎಸ್‌ಸಿ) ಅಡಿಯಲ್ಲಿ ಸೇನೆಯ ಕೆಲವೇ ಕೆಲವು ವಿಭಾಗಗಳಿಗೆ ನೇಮಕವಾಗುವ ಮಹಿಳೆಯರಿಗೆ 14 ವರ್ಷಗಳವರೆಗೆ ಸೇವೆ ಸಲ್ಲಿಸಲು ಮಾತ್ರ ಅವಕಾಶವಿದೆ. ಆದರೆ, ಪುರುಷರಿಗೆ 14 ಕಳೆದ ಮೇಲೆ ಐದು ವರ್ಷಗಳ ನಂತರ ಅವರನ್ನು ಪುನಃ ಸೇನೆಗೆ ಸೇರಿಸಿಕೊಳ್ಳಲಾಗುತ್ತದೆ. ಇದರ ವಿರುದ್ಧ ನಿವೃತ್ತ ಮಹಿಳಾ ಅಧಿಕಾರಿಗಳು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ.

4